ಜೆಎಸ್‌ಎಸ್ ಮಹಾವಿದ್ಯಾಪೀಠ
ಜಗದ್ಗುರು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಮೈಸೂರು

# ಜ್ಞಾನವಾರಿಧಿ–45

## ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮ

11 ಅಕ್ಟೋಬರ್ 2021 * ಸೋಮವಾರ * ಸಂಜೆ 6.00

### ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಸುತ್ತೂರು ಶ್ರೀಕ್ಷೇತ್ರ

### ಉಪನ್ಯಾಸ



**ಶ್ರೀ ಸಿ.ಸಿ. ಪಾವಟೆ**
ನಿರ್ದೇಶಕರು, ‘ಮಿತ್ರ’ ಆಪ್ತ ಸಮಾಲೋಚನ ಕೇಂದ್ರ
ತುಮಕೂರು

ವಿಷಯ : ಮಾನವನಲ್ಲಿರುವ ಅದ್ಭುತ ಶಕ್ತಿಯ ಅರಿವು

(ಉಪನ್ಯಾಸದ ನಂತರ ಆನ್‌ಲೈನ್‌ನಲ್ಲಿ ಬರುವ ಪ್ರಶ್ನೆಗಳಲ್ಲಿ ಆಯ್ದವುಗಳಿಗೆ ಉತ್ತರಿಸಲಾಗುವುದು)

ಆನ್‌ಲೈನ್ ಮೂಲಕ ನೇರವಾಗಿ ವೀಕ್ಷಿಸಲು ಹಾರ್ದಿಕ ಸ್ವಾಗತ

LIVE STREAMING

YouTube http://Youtube.com/c/JSSMahavidyapeethaonline

https://www.facebook.com/JSSMVP

**ಜ್ಞಾನವಾರಿಧಿ** ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮವನ್ನು 2020ರ ಡಿಸೆಂಬರ್ ತಿಂಗಳಿನಿಂದ ಪ್ರತಿ ಸೋಮವಾರ ಏರ್ಪಡಿಸಿಕೊಂಡು ಬರಲಾಗುತ್ತಿದೆ. ಧರ್ಮ, ಅಧ್ಯಾತ್ಮ, ಯೋಗ, ಕಲೆ, ಸಾಹಿತ್ಯ, ಸಂಸ್ಕೃತಿ, ಆರೋಗ್ಯ, ಜೀವನಶೈಲಿ, ವಿಜ್ಞಾನ, ತಂತ್ರಜ್ಞಾನ ಮುಂತಾದ ವಿಷಯಗಳು ಮತ್ತು ಪ್ರಚಲಿತ ವಿದ್ಯಮಾನಗಳನ್ನು ಕುರಿತು ದೇಶ ಮತ್ತು ವಿದೇಶದ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಆಯೋಜಿಸಲಾಗುತ್ತಿದೆ.

ಶ್ರೀ ಸಿ.ಸಿ. **ಪಾವಟೆಯವರು** ತುಮಕೂರಿನ 'ಮಿತ್ರ' ಆಪ್ತ ಸಮಾಲೋಚನ ಕೇಂದ್ರದ ನಿರ್ದೇಶಕರು. ಮಕ್ಕಳ ಭಾವನಾತ್ಮಕ ಸಂಗತಿಗಳನ್ನು ಆವಿಷ್ಕರಿಸಲು ಅಗತ್ಯವಾದ ಸ್ನೇಹಮಯ ವಾತಾವರಣವನ್ನು ನಿರ್ಮಿಸಬಲ್ಲ ಸಮರ್ಥರು. ಹಾಗೆಯೇ ಮಕ್ಕಳಿಗೆ ವಿಶೇಷವಾಗಿ ಇರಬಹುದಾದಂಥ ಸಮಸ್ಯೆಗಳನ್ನು ಪರಿಹರಿಸಲು ಬೇಕಾದ ವಿವಿಧ ಸಮಾಲೋಚನಾ ತಂತ್ರಗಳಲ್ಲಿ ಸಿದ್ಧಹಸ್ತರು. ಐಎಎಸ್ ಮತ್ತು ಐಪಿಎಸ್ ಹುದ್ದೆಗಳ ಪ್ರಶಿಕ್ಷಣಾರ್ಥಿಗಳಿಗೆ ಅಗತ್ಯವಾದ ವೃತ್ತಿಪರ ತರಬೇತಿ ನೀಡುತ್ತಿದ್ದಾರೆ. ವ್ಯಕ್ತಿತ್ವ ವಿಕಸನ ಕ್ಷೇತ್ರದ ಹಿರಿಯ ಅನುಭವಿ ತರಬೇತುದಾರರಾಗಿದ್ದಾರೆ.

ಸಾಂಸ್ಥಿಕ ಆಡಳಿತ ನಿರ್ವಹಣೆ, ಮಾನವ ಸಂಪನ್ಮೂಲ ಸಂಗತಿಗಳು ಇವರ ವಿಶಿಷ್ಟ ಆಸಕ್ತಿಯ ಕ್ಷೇತ್ರಗಳು. ಈ ವಿಷಯಗಳಿಗೆ ಸಂಬಂಧಿಸಿದಂತೆ ಕೈಪಿಡಿಗಳು ಮತ್ತು ಗ್ರಂಥಗಳನ್ನು ರಚಿಸಿದ್ದಾರೆ. ವಿವಿಧ ಉದ್ಯಮಗಳು, ಸರ್ಕಾರಿ ಮತ್ತು ಅರೆಸರ್ಕಾರಿ ಕಚೇರಿಗಳು ಹಾಗೂ ಕಾರ್ಪೊರೇಟ್ ವಲಯಗಳಲ್ಲಿ ನುರಿತ ತರಬೇತುದಾರರಾಗಿ ಪ್ರಖ್ಯಾತಿ ಹೊಂದಿದ್ದಾರೆ. ತುಮಕೂರಿನ ವ್ಯಾಜ್ಯ ವಿಲೇವಾರಿ, ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆ ಮೂಲಕ ಬಡತನ ನಿರ್ಮೂಲನೆ ಮತ್ತು ಮಹಿಳಾ ಪ್ರಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಈ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ರೇಡಿಯೋ, ದೂರದರ್ಶನಗಳಲ್ಲಿ ಇವರ ಅನೇಕ ಸಂದರ್ಶನಗಳು ಪ್ರಸಾರವಾಗಿವೆ. ಇಪ್ಪತ್ತಕ್ಕೂ ಹೆಚ್ಚು ಶೀರ್ಷಿಕೆಗಳಡಿಯಲ್ಲಿ ಇದುವರೆಗೆ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಜನರಿಗೆ ತರಬೇತಿ ನೀಡಿದ್ದಾರೆ. ಹಲವಾರು ಉನ್ನತ ಸಮಿತಿಗಳ ಸದಸ್ಯರಾಗಿದ್ದಾರೆ. ತುಮಕೂರು ಜಿಲ್ಲಾ ಯುವಜನ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿ–ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

**ಜ್ಞಾನವಾರಿಧಿ–46 * 18 ಅಕ್ಟೋಬರ್ 2021**

**ಡಾ. ಎ.ಎಸ್. ಚಂದ್ರಶೇಖರ್**

ಖ್ಯಾತ ಆಯುರ್ವೇದ ವೈದ್ಯರು
ಮೈಸೂರು

ವಿಷಯ: ಮನೆಮದ್ದು

**ಜ್ಞಾನವಾರಿಧಿ–47 * 25 ಅಕ್ಟೋಬರ್ 2021**

**ಶ್ರೀಮತಿ ಎಸ್. ನಾಗಶ್ರೀ ತ್ಯಾಗರಾಜ್**

ಹಿರಿಯಶ್ರೇಣಿ ಉಪನ್ಯಾಸಕರು
ಡಿಎಸಿಜಿ ಸರ್ಕಾರಿ ಪಾಲಿಟೆಕ್ನಿಕ್, ಚಿಕ್ಕಮಗಳೂರು

ವಿಷಯ : ಸನ್ಮಾರ್ಗ–ಗುರು